ಶ್ರೀ ಟಿ. ತಾರೇಗೌಡ.—ಶಿರಾ ತಾಲ್ಲೂಕಿಗೆ 40 ಮಂಜೂರು ಮಾಡಿದೆ; ಪಾವಗಡ ತಾಲ್ಲೂಕಿಗೆ 30 ಮಂಜೂರು ಮಾಡಿದೆ ಎಂದು ತಿಳಿಸಲಾಗಿದೆ. ಶಿರಾ ತಾಲ್ಲೂಕು ಹುಲಕುಂಟೆ ಮತ್ತು ಗೌಡಗೆರೆ ಹೋಬಳಿ ಗಳಿಗೂ ಪಾವಗಡ ತಾಲ್ಲೂಕು, ನಾಗಲಮಡಿಕೆ ಹೋಬಳಿಗೂ ಒಂದನ್ನೂ ಕೊಡದೇ ಇರುವುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹೋಬಳಿವಾರು ಹಂಚುವ ವಿಚಾರವಿಲ್ಲ. ಎಲ್ಲಿ ಅಗತ್ಯವಿದೆಯೋ ಅಲ್ಲಿಗೆ ಕೊಟ್ಟಿದೆ. ಹಿಂದೆ ನಾನು ಹೇಳಿದ್ದೇನೆ. ಯಾರಿಗಾ ದರೂ ಐ.ಪಿ. ಸೆಟ್ಸ್ ಬೇಕಾದರೆ, ಪೂರ್ವಭಾವಿ ಸಿದ್ಧ ತೆಗಳಾಗಬೇಕು, ಪವರ್‌ಲೈನ್ ಎಳೆಯಬೇಕು, ವೈರಿಂಗ್ ಮುಂತಾದುವೆಲ್ಲವನ್ನೂ ಸಿದ್ಧಪಡಿಸಬೇಕು. ಇವೆಲ್ಲವೂ ಆದರೆ, ಆಗ ಸರ್ವಿಸ್ ಕೊಡುತ್ತಾರೆ. ಸರ್ಕಾರದವ ರಾಗಲೀ ಈಗ ವಿದ್ಯುಚ್ಛಕ್ತಿ ಬೋರ್ಡಿನವರಾಗಲೀ ಹೋಬಳಿವಾರು ಈ ಕೆಲಸ ನಡೆಸುತ್ತಿಲ್ಲ. ಎಲ್ಲಿ ಕೆಲಸ ವಾಗಬೇಕೋ ಅಲ್ಲಿ ರೂಲ್ಸ್ ಪ್ರಕಾರ ಕಟ್ಟಬೇಕಾದ ಮೊಬಲಗನ್ನು ಕಟ್ಟಿದ್ದರೆ ಅದನ್ನು ನೋಡಿ, ಅಲ್ಲಿ ಮಾಡುತ್ತಿದ್ದಾರೆ.

ಶ್ರೀ ಟಿ. ತಾರೇಗೌಡ.–ಸಿರಾ ತಾಲ್ಲೂಕಿನಲ್ಲಿ ಡಿಪಾ ಜಿಟ್ ಕಟ್ಟಿ ಕಂಪ್ಲೀಷನ್ ಸರ್ಟಿಫಿಕೇಟ್ ಕೊಟ್ಟು ಅನೇಕ ಕಡೆ ಬೇಡಿಕೆಗಳು ಇಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ —ಇರಬಹುದು.

ಶ್ರೀ ಟಿ. ತಾರೇಗೌಡ.—ಎಲೆಕ್ಟ್ರಿಸಿಟಿ ಬೋರ್ಡು ಸ್ಪೆಷಲ್ ಪೈ ೃಯಾರಿಟಿ ಕೊಟ್ಟು ಎಸ್ಟಿಮೇಟು ಬಂದಿ ದ್ದರೆ ಆಡಳಿತದ ಸ್ಯಾಂಷನ್ ಕೊಡಬೇಕೆಂದು ನೋಟೆನೆ ಕೊಟ್ಟಿದ್ದಾರೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಕೊಡಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶೇಕಡಾ 70 ರಷ್ಟು ಕಂಪ್ಲೀಷನ್ ರಿಪೋರ್ಟು ಬಂದರೆ ಮಾತ್ರ ಸರ್ವಿಸ್ ಕೊಡಬೇಕು ಎಂದು ಇರುವಾಗ ರೂಲ್ಸು ವ್ಹಾಯಲೇಟ್ ಮಾಡಿದ್ದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾವ ಯಾವ ಭಾಗ ದಲ್ಲಿ ಎಂಬುದು ಗೊತ್ತಾಗುವುದಿಲ್ಲ. ಯಾವ ರೀತಿ ರೂಲ್ಸು ಅಪ್ಲೈ ಮಾಡುತ್ತಾರೆ ಮತ್ತು ಎಲ್ಲಿಯಾದರೂ ರೂಲ್ಸು ವ್ಹೈಲೇಟ್ ಮಾಡಿದ್ದಾರೆಯೇ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಶಿರಾ ಮತ್ತು ಪಾವಗಡ ತಾಲ್ಲೂಕಿನಲ್ಲಿ ಎಸ್ಟಿಮೇಟು ಸ್ಯಾಂಕ್ಷನ್ ಆಗಿದೆ. ಶೇಕಡಾ 70 ರಷ್ಟು ಕಂಪ್ಲೀಷನ್ ರಿಪೋರ್ಟ್ ಬಂದಿದ್ದರೆ ರೂಲ್ಸು ಪ್ರಕಾರ ಅನುಸರಿಸಲಾಗುವುದು. ಆದರೆ ಪ್ರತಿಯೊಂದು ವೈಯಕ್ತಿಕ ಕೇಸಿನ ವಿಚಾರದ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ.

ಶ್ರೀ ಜಿ. ನಾರಾಯಣಗೌಡ.–ರಾತ್ರಿ ಹತ್ತು ಗಂಟೆ ಯಿಂದ ಬೆಳಗ್ಗೆ ನಾಲ್ಕು ಗಂಟೆಯವರೆಗೆ ನೀರಾವರಿಯ ನಲುವಾಗಿ ಎಲೆಕ್ಟ್ರಿಸಿಟಿ ತೆಗೆದುಕೊಳ್ಳಬೇಕೆಂದು ಒಂದು ಆರ್ಡರ್ ಆಗಿದೆಯೇ ?

ಅಧ್ಯಕ್ಷರು.—ಈ ಉಪಪ್ರಶ್ನೆ ಉದ್ಭವಿಸುವುದಿಲ್ಲ.

Sri J. B. MALLARADHYA.—In answer to (*c*) the Government say 'that it is being referred to the Board'. Hereafter for any manner of supply of electricity, is the Board to be consulted or the Government has to give answer ?

Sri H. K. VEERANNA GOWDH.—Government will answer.

Sri J. B. MALLARADHYA.—May I know whether the Government will take the responsibility of furnishing answers in future ?

Sri H. K. VEERANNA GOWDH.—Government will certainly take the responsibility for answering every question.

Prevention of Gambling in New York Cotton Market in the State.

Q.—1347. Sri C. S. HULKOTI (Mundargi).—

Will the Government be pleased to state :—

(*a*) whether they are aware that gambling in respect of New York Cotton Market is rampant in the State especially in North Karnatak districts urban and rural ;

(*b*) whether they have taken any special steps to prevent the same ?

A.—Sri C. M. POONACHA (Minister for Home Affairs and Industries).—

(*a*) It is not rampant in urban area and not prevalent in rural areas.

(*b*) Adequate steps are taken to prevent it by making surprise raids and by prosecuting the offenders.

Sri C. S. HULKOTI.—May I know the number of raids made ?

*Sri C. M. POONACHA.—I do not have figures to show the number of raids detected. However, I can furnish figures relating to the number of cases detected and they are as follows :

For the period commencing from January 1957 till the end of February 1958, for the whole State—City areas ...	1,671 cases
Do mofussil areas	694 cases

Sri C. S. HULKOTI.—Is it for rural areas ?

Sri C. M. POONACHA.—Not exactly. It is for district and city areas. Virtually they are urban areas and I am making distinction between the city and other areas.

Sri H. V. KOUJALGI.—How many of these cases have ended in conviction ?

Sri C. M. POONACHA.—They have been deteced and cases have been put up and I have no figures to show how many have ended in conviction.

Sri G. B. SHANKAR RAO.—In view of the large number of cases, may I know whether the Government have appointed special staff for detecting or entrusting this work to regular police officers ?

Sri C. M. POONACHA.—We have in some of the city areas special squads to detect not only gambling cases but also some other kind of cases. These special squads who are on duty, book these cases.

Sri F. X. DENIS PINTO.—On what basis it is stated that it is rampant in urban areas ?

Sri C. M. POONACHA.—The suggestion 'rampant' denotes a very serious thing. It is not doubt prevalent but it is not rampant. In rural areas it is not practically prevalent.

Sri A. R. BADRI NARAYAN.—Has the offence been reduced as a consequence of the steps taken by the Government ?

Sri C. M. POONACHA.—In some place it is very much under control.

Sri V. SRINIVAS SHETTY.—Are the Government aware that this sort of gambling is taking place with the close co-operation of the Post Offices ?

Sri C. M. POONACHA.—I am unable to furnish information because that department is not under the control of this Government.

Sri V. SRINIVAS SHETTY.—Are the Government aware that unless they get a telegram stating the correct figures gambling cannot be carried on ?

Sri C. M. POONACHA.—It is true that they are carried on in a variety of code words. It is very difficult to detect.

Sri V. SRINIVAS SHETTY.—Are the Government aware that unless they get close co-operation of the Post Offices the whole gambling process cannot be put down ?

Sri C. M. POONACHA.—That is a suggestion for action.

ಶ್ರೀ ಎಕ್. ಜಿ. ನರಸಿಂಹೇಗೌಡ.—ಕಾಟನ್ ಮಾರ್ಕೆಟ್ ನಂಬಂಧವಾಗಿ ನಡೆಯುವ ಜೂಜಾಟವನ್ನು ಪೋಲೀಸಿನವರ ಸಹಾಯವಿಲ್ಲದೆ ಬೇರೆ ಇರಾಖೆ ಏರ್ಪಡಿಸಿ ನಂಪೂರ್ಣವಾಗಿ ನಿಲ್ಲಿಸುವುದಕ್ಕಾಗುತ್ತದೆಯೆ ?

ಶ್ರೀ ಸಿ. ಎಂ. ಪೂಣಚ್ಚ.—ಅದು ಪೋಲೀಸ್ ಇಲಾಖೆಯ ಮೂಲಕವೇ ಆಗಬೇಕಾಗುತ್ತದೆ. ಜೂಜಾಟ ನಡೆಯುವುದು ಪತ್ತೆಯಾದಾಗ ಓಡನೆ ದನ್ನಗಿರಿ ಮಾಡಬೇಕಾಗುತ್ತದೆ. ಬೇರೆಯವರಿಗೆ ಹೋಗಿ ದನ್ನಗಿರಿ ಮಾಡುವುದಕ್ಕೆ ಅಧಿಕಾರವಿರುವುದಿಲ್ಲ. ಆದ್ದರಿಂದ ಬೇರೆ ಏರ್ಪಾಡಿನಿಂದ ವಿಶೇಷ ಫಲ ಬರಲಿಕ್ಕಿಲ್ಲ.

ಶ್ರೀ ಎಕ್. ಜಿ. ನರಸಿಂಹೇಗೌಡ.—ಪೋಲೀಸಿನವರು ಪ್ರತಿ ತಿಂಗಳೂ ಮಾಮೂಲು ತೆಗೆದುಕೊಳ್ಳುತ್ತಿರುವುದರಿಂದ ಜೂಜಾಟವಾಡುವವರನ್ನು ಕಂಡು ಕಿಡಿಯುವುದು ಅಸಾಧ್ಯವಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಸಿ. ಎಂ. ಪೂಣಚ್ಚ.—ಅಂಥ ವಿಷಯ ನನ್ನ ಗಮನಕ್ಕೆ ಬಂದಿಲ್ಲ.

ಡಾ॥ ಬಿ. ಕೆ. ನಾಗೂರ್.—ಪ್ರಶ್ನೆಯ (a) ಭಾಗಕ್ಕೆ "ಪಟ್ಟಣಗಳಲ್ಲಿ ವಿಶೇಷವಿಲ್ಲ; ಹಳ್ಳಿಗಳಲ್ಲಿ ಕಂಡು ಬಂದಿಲ್ಲ." ಎಂದು ಉತ್ತರವಿದೆ. ಬಿಜಾಪುರ, ಕಾರವಾರ, ಬೆಳಗಾಂವ್ ಈ ಪ್ರಾಂತಗಳಲ್ಲಿ ಪೋಲೀಸಿನವರಿಗೆ ಮಾಮೂಲು ಕೊಟ್ಟು ಓಸಿ ಆಟ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಸಿ. ಎಂ. ಪೂಣಚ್ಚ.—ಇಲ್ಲ.

ಡಾ॥ ಬಿ. ಕೆ. ನಾಗೂರ್.—ಬಂದರೆ ಕೂಡಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಸಿ. ಎಂ. ಪೂಣಚ್ಚ.—ಖಂಡಿತವಾಗಿ ತೆಗೆದುಕೊಳ್ಳುತ್ತೇವೆ.

ಶ್ರೀ ಎ. ಆರ್. ಪಂಚಗವಿ.—ಪ್ರತಿಯೊಂದು ಸ್ಥಳದಲ್ಲೂ ಜೂಜಾಟದ ಕೇಂದ್ರಗಳಿವೆಯೆಂಬುದು ಗಮನಕ್ಕೆ ಬಂದಿದೆಯೆ ?

ಶ್ರೀ ಸಿ. ಎಂ. ಪೂಣಚ್ಚ.—ಪಟ್ಟಣಗಳಲ್ಲಿ ಕೆಲವು ಕೇಂದ್ರಗಳಿವೆ. ಅವುಗಳನ್ನು ನಾವು ಆಗಾಗ್ಗೆ ಪತ್ತೆಹಚ್ಚಿ ಕೇಸು ಹಾಕುತ್ತಿದ್ದೇವೆ.

ಶ್ರೀ ಎ. ಆರ್. ಪಂಚಗವಿ.—ಪಾರ್ಸುಪಾರಿ ಅಂಗಡಿಯವರು ಈ ನಂಬಂಧವಾದ ಏಜೆನ್ಸಿ ಇಟ್ಟುಕೊಂಡಿದ್ದಾರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಸಿ. ಎಂ. ಪೂಣಚ್ಚ.—ಅಂಥ ನಿದರ್ಶನವಿದೆ.

ಶ್ರೀ ಎಂ. ಆರ್. ಪಾಟೀಲ್.—ಅಂಟಿಕರಪ್ಷನ್ ಇಲಾಖೆ ಅಥವಾ ಬೇರೊಂದು ಇಲಾಖೆಯಿಂದ ನಮಾಚಾರ ವೆರಿಫೈ ಮಾಡುವುದಕ್ಕೇನಾದರೂ ಏರ್ಪಾಡಿದೆಯೆ ?

ಶ್ರೀ ಸಿ. ಎಂ. ಪೂಣಚ್ಚ.—ಈ ಬಗ್ಗೆ ಮಾಹಿತಿ ಇರುವ ಸ್ಪೆಷಲ್ ಪೋಲೀಸ್ ಸಿಬ್ಬಂದಿಯನ್ನು ಸರ್ಕಾರದವರು ಇಟ್ಟಿದ್ದಾರೆ. ಆಕಸ್ಮಿಕ ಧಾಳಿಗಳನ್ನು ಮಾಡಿ ಕೇಸು ಹಾಕುವುದಕ್ಕೆ ಪ್ರತ್ಯೇಕ ಪೋಲೀಸ್ ಪಡೆಯಿದೆ. ಈ ಎರಡೂ ಕೂಡ ನಹಕಾರದಿಂದ ಕೆಲನ ಮಾಡುತ್ತಾ ಇವೆ.

ಶ್ರೀ ಸಿ. ಎಸ್. ಹುಲ್ಕೋಟಿ.—ಈ ತರಹದ ಆಟ ರೈಲ್ವೆ ಸ್ಟೇಷನ್‌ಗಳಲ್ಲೂ ನಡೆಯುತ್ತಿದೆಯೆಂಬುದು ಸರ್ಕಾರದ ಅವಗಾಹನೆಗೆ ಬಂದಿದೆಯೆ ?

ಶ್ರೀ ಸಿ. ಎಂ. ಪೂಣಚ್ಚ.—ಸ್ಟೇಷನ್‌ಗಳಲ್ಲಿ, ಸಿನೀಮಾಬಳಿ, ನಂದಿಗೊಂದಿಗಳಲ್ಲಿ, ಮೂಲೆ ಮೂಲೆಗಳಲ್ಲಿ ನಡೆಯುತ್ತಿದೆಯೆಂಬುದು ಗಮನಕ್ಕೆ ಬಂದಿದೆ